ದಿನಾಂಕ 22-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಜಿ.ಎಸ್.ಕೆ ವಕೀಲರಿಂದಃ**

1. ವಾದಿಯು ಗಂಗಾಮತ ಸಮಾಜದಲ್ಲಿ ಹಿರಿಯ ವ್ಯಕ್ತಿ ಎಂದರೆ ಸರಿ. ಗಂಗಾಮತ ಸಮಾಜದಲ್ಲಿ ಯಾವುದೇ ಸಮಸ್ಯೆ ಬಂದರೂ ಅವುಗಳನ್ನು ವಾದಿಯೇ ಮುಂದೆ ನಿಂತು ಪಂಚಾಯಿತಿ ಮಾಡಿ ಸಮಸ್ಯೆ ಬಗೆಹರಿಸುತ್ತಾರೆ ಎಂದರೆ ಸರಿಯಲ್ಲ. ಗಂಗಾಮತ ಸಮಾಜವನ್ನು ಬೆಳೆಸುವಲ್ಲಿ ವಾದಿಯೂ ಸಹ ಕಾರಣೀಭೂತರು ಎಂದರೆ ಇರಬಹುದು. ಕಲ್ಲಾಪುರದಲ್ಲಿ ಇರುವ ಗಂಗಾಮತ ಸಮಾಜವನ್ನು ಸಂಘಟನೆಗೊಳಿಸಿ ವಾದಿಯ ನಿರ್ದೇಶನದಂತೆ ಅದನ್ನು ನೋಂದಾಯಿಸಲಾಗಿದೆ ಎಂದರೆ ಆ ಸಂಘಟನೆಯ ಎಲ್ಲರ ಸಾಮೂಹಿಕ ಹಿತಾಸಕ್ತಿಯಂತೆ ನೋಂದಾಯಿಸಲಾಗಿದೆ ಎಂದು ನುಡಿಯುತ್ತಾರೆ.

2. ನಾನು ಮತ್ತು ವಾದಿಯು ಸಂಬಂಧಿಗಳು ಎಂದರೆ ಸರಿಯಲ್ಲ. ವಾದಿಯು ನನಗೆ ಸಂಬಂಧದಲ್ಲಿ ಮಾವ ಎಂದರೆ ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗಂಗಾಮತ ಸಮಾಜದ ಮುಂದಾಳತ್ವವನ್ನು ವಹಿಸಲು ನನ್ನ ಮತ್ತು ವಾದಿಯ ನಡುವೆ ಅಸೂಯೆಗಳು ಇದ್ದವು ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಅಸೂಯೆಗಳು ಇರುವುದರಿಂದ ಗಂಗಾಮತ ಸಮಾಜವನ್ನು ನೊಂದಣಿ ಮಾಡುವ ಸಮಯಕ್ಕೆ ನಾನು ಮತ್ತು ನನ್ನ ಸಮಾಜದ ಇತರರು ಆತನ ನಿರ್ದೇಶನಗಳನ್ನು ಕಿವಿಗೆ ಹಾಕಿಕೊಳ್ಳದೇ ಆತನನ್ನು ಬಿಟ್ಟು ನೋಂದಾಯಿಸಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ